ಕರ್ನಾಟಕ ಸರ್ಕಾರ

ಜಂಟಿ ನಿರ್ದೇಶಕರ ಕಛೇರಿ, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು-02

ದೂ.ಸಂ:22242943, ಫ್ಯಾಕ್ಸ್ :22271998, ಇ-ಮೇಲ್: jd_mms@yahoo.co.in

ಸಂಖ್ಯೆ:ಎಂ8/ಮ.ಉ.ಯೋ./ಸುಪ್ರೀಂಕೋರ್ಟ್4/2016-17

ದಿನಾಂಕ: 21-04-2017

# ಸುತ್ತೋಲೆ

ವಿಷಯ: ಮಧ್ಯಾಹ್ನ ಉಪಹಾರ ಯೋಜನೆಯ ಶಾಲಾವಾರು ಮಾಹಿತಿಯನ್ನು ಸಂಗ್ರಹಿಸಲು ಇಲಾಖಾ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ.

ಉಲ್ಲೇಖ:
1. ನಿರ್ದೇಶಕರು, ಎಂ.ಹೆಚ್.ಆರ್.ಡಿ., ನವದೆಹಲಿ ಯವರ ಪತ್ರ ಸಂಖ್ಯೆ10-23/ 2013, ಇಇ-5(MDM-1-2) ದಿನಾಂಕ 9.3.2017
2. ಅಧೀನ ಕಾರ್ಯದರ್ಶಿ, ಭಾರತ ಸರ್ಕಾರ ಎಂ.ಹೆಚ್.ಆರ್.ಡಿ., ನವ ದೆಹಲಿಯವರ ಪತ್ರ ಸಂಖ್ಯೆ10-23/2013,ಇಇ-5(MDM-1-2) ದಿನಾಂಕ 30.3.2017

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ನಿರ್ದೇಶಕರು, ಎಂ.ಹೆಚ್.ಆರ್.ಡಿ, ನವದೆಹಲಿ ರವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:618/2013ಕ್ಕೆ ಸಂಬಂಧಿಸಿದಂತೆ ದಿನಾಂಕ 23.03.2017ರಲ್ಲಿ ನೀಡಿರುವ ಮಧ್ಯಂತರ ತೀರ್ಪಿನ ಪ್ರಕಾರ ರಾಜ್ಯದಲ್ಲಿನ ಮಧ್ಯಾಹ್ನ ಉಪಹಾರ ಯೋಜನೆಯನ್ನು ಪಡೆಯುತ್ತಿರುವ ಎಲ್ಲಾ ಶಾಲೆಗಳಿಂದ School wise Chart ಎಂಬ ಶೀರ್ಷಿಕೆಯಡಿ ನೀಡಿರುವ ನಮೂನೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಬೇಕಾಗಿರುತ್ತದೆ. ಸಂಗ್ರಹಿಸಿದ ಮಾಹಿತಿಯನ್ನು ಸಹಾಯಕ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆರವರು ಪರಿಶೀಲಿಸಿ ಸರಿ ಇರುವುದನ್ನು ಖಾತ್ರಿಪಡಿಸಿಕೊಂಡು ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರ ಮೊಹರಿನೊಂದಿಗೆ ಸಹಿಯನ್ನು ಪಡೆಯುವುದು. ಒಂದು ಪ್ರತಿಯನ್ನು ಶಾಲೆಯಲ್ಲಿಯೇ ರಕ್ಷಿಸಿಡಲು ಸೂಚನೆಗಳನ್ನು ನೀಡುವುದು. School wise Chart ನ ನಮೂನೆಯಲ್ಲಿ ಶಾಲೆಯ ಡೈಸ್ ಸಂಖ್ಯೆ ಹಾಗೂ ಎಂ.ಐ.ಎಸ್., ಸಂಖ್ಯೆಯನ್ನು ಕಡ್ಡಾಯವಾಗಿ ದಾಖಲಿಸುವುದು. (ನಮೂನೆ ಲಗತ್ತಿಸಿದೆ). ನಮೂನೆಯಲ್ಲಿ ಮಾಹಿತಿಗಳನ್ನು ಭರ್ತಿ ಮಾಡಲು ಅನುಸರಿಸಬೇಕಾದ ಸೂಚನೆ ಮತ್ತು ವಿವರಗಳನ್ನು ಕೆಳಗೆ ನೀಡಲಾಗಿದೆ.

ಸೂಚನೆಗಳು:

1. ಎಲ್ಲಾ ಪ್ರಶ್ನೆಗಳಿಗೆ ಆಂಗ್ಲ ಭಾಷೆಯಲ್ಲಿಯೇ ಉತ್ತರವನ್ನು ಬರೆಯುವುದು.
2. ನಿಮ್ಮ ಗ್ರಹಿಕೆಗಾಗಿ ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ಕನ್ನಡಕ್ಕೆ ಭಾಷಾಂತರಿಸಿ, ಪ್ರತಿ ಪ್ರಶ್ನೆಗೂ ಸಂಭಾವ್ಯ ಮಾದರಿ ಉತ್ತರವನ್ನು ನೀಡಲಾಗಿದೆ. ಆದರೆ ಶಾಲಾ ಹಂತದಿಂದ ಮಾಹಿತಿಯನ್ನು ಸಂಗ್ರಹಿಸುವಾಗ ಆಂಗ್ಲ ನಮೂನೆಯಲ್ಲಿಯೇ ಆಂಗ್ಲ ಭಾಷೆಯಲ್ಲಿಯೇ ಭರ್ತಿ ಮಾಡಬೇಕು.
3. ಪ್ರತಿ ಪ್ರಶ್ನೆಗೆ ಸಂಬಂಧಿಸಿದಂತೆ, ಪ್ರತಿ ಶಾಲೆಯ ನೈಜ ಮಾಹಿತಿ/ಅಂಕಿ ಅಂಶಗಳನ್ನು ಆಧರಿಸಿ, ಅಗತ್ಯ ಬದಲಾವಣೆ ಮಾಡಿಕೊಳ್ಳುವುದು.
4. ಶಾಲಾವಾರು ನಮೂನೆಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಲು ಸೂಚಿಸಿದೆ.

ಪ್ರಶ್ನೆ ಸಂಖ್ಯೆಗಳಿಗೆ ಸಂಬಂಧಿಸಿದಂತೆ:

- 1ಕ್ಕೆ ಸಂಬಂಧಿಸಿದಂತೆ ಆ ಶಾಲೆಯ ಒಟ್ಟು ದಾಖಲಾತಿಯನ್ನು ನಮೂದಿಸುವುದು.
- 2ರಿಂದ 4.5ರ ವರೆಗೆ ಮಾದರಿ ಉತ್ತರವನ್ನು ನೀಡಲಾಗಿದೆ.
- 5.1ರಲ್ಲಿ ದಾಸ್ತಾನು ಮತ್ತು ಅಡುಗೆ ಕೋಣೆಯ ವಿಸ್ತೀರ್ಣ ಹಾಗೂ ಇರುವ ಇತರೆ ಸೌಲಭ್ಯಗಳನ್ನು ಪ್ರತ್ಯೇಕವಾಗಿ ನಮೂದಿಸುವುದು.
- 5.2ರಲ್ಲಿ (ಶಾಲೆಗೆ ಕೇಂದ್ರೀಕೃತ ಅಡುಗೆ ಕೋಣೆಯಿಂದ ಬಿಸಿಯೂಟ ಸರಬರಾಜಾಗುತ್ತಿದ್ದಲ್ಲಿ ಮಾತ್ರ) ಕೇಂದ್ರೀಕೃತ ಅಡುಗೆ ಕೋಣೆಯಿಂದ ಶಾಲೆಗೆ ಇರುವ ದೂರವನ್ನು ಕಿ.ಮೀ.ಗಳಲ್ಲಿ ಹಾಗೂ ಶಾಲೆಗೆ ಬಿಸಿಯೂಟ ತಲುಪಲು ತೆಗೆದುಕೊಳ್ಳುವ ಸಮಯವನ್ನು ನಿಮಿಷಗಳಲ್ಲಿ ನಮೂದಿಸುವುದು.
- 5.3ಕ್ಕೆ ಮಾದರಿ ಉತ್ತರವನ್ನು ನೀಡಿದೆ.
- 5.4ರಲ್ಲಿ ಶಾಲೆಯಲ್ಲಿರುವ ಸ್ಟೀಲ್ ಮತ್ತು ಪ್ಲಾಸ್ಟಿಕ್ ಸಂಗ್ರಾಹಕಗಳ (ಕಂಟೈನರ್ಸ್) ಸಂಖ್ಯೆಯನ್ನು (ಬಿಟ್ಟಿರುವ ಸ್ಥಳಗಳಲ್ಲಿ) ನಮೂದಿಸುವುದು.

- 5.5ರಲ್ಲಿ ಶಾಲೆಯಲ್ಲಿರುವ ಅಡುಗೆಗೆ ಬಳಸುವ ಸ್ಟೀಲ್ ಮತ್ತು ಹಿಂಡಾಲಿಯಂ ಪಾತ್ರೆಗಳ ಸಂಖ್ಯೆಯನ್ನು (ಬಿಟ್ಟಿರುವ ಸ್ಥಳಗಳಲ್ಲಿ) ನಮೂದಿಸುವುದು.
- 5.6ಕ್ಕೆ ಮಾದರಿ ಉತ್ತರವನ್ನು ನೀಡಿದೆ.
- 5.7ರಲ್ಲಿ ಕೈ ತೊಳೆಯಲು ಲಭ್ಯವಿರುವ ನಲ್ಲಿ/ಕೊಳಾಯಿಗಳ ಸಂಖ್ಯೆ ಹಾಗೂ ಸೋಪ್ ಇಡುವ ಸ್ಥಳಗಳ ಸಂಖ್ಯೆಯನ್ನು (ಬಿಟ್ಟಿರುವ ಸ್ಥಳಗಳಲ್ಲಿ) ನಮೂದಿಸುವುದು.
- 5.8ರಿಂದ 8.2ರ ವರೆಗೆ.ಮಾದರಿ ಉತ್ತರವನ್ನು ನೀಡಿದೆ.
- 8.3ರಲ್ಲಿ ಶಾಲೆಯಲ್ಲಿರುವ ಮುಖ್ಯ ಅಡುಗೆಯವರು ಮತ್ತು ಸಹಾಯಕ ಅಡುಗೆಯವರ ಸಂಖ್ಯೆಯನ್ನು (ಬಿಟ್ಟಿರುವ ಸ್ಥಳಗಳಲ್ಲಿ) ನಮೂದಿಸುವುದು.
- 8.4ರಿಂದ 11.1 ರ ವರೆಗೆ ಮಾದರಿ ಉತ್ತರವನ್ನು ನೀಡಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮಾಹಿತಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದೆ.

(ವಿ. ಸುಮಂಗಲ) 21/4/17
ಜಂಟಿ ನಿರ್ದೇಶಕರು,
ಮಧ್ಯಾಹ್ನ ಉಪಹಾರ ಯೋಜನೆ,
ಬೆಂಗಳೂರು.
21/4/17

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್, ಇವರ ಮುಂದಿನ ಕ್ರಮಕ್ಕಾಗಿ
2. ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಇವರ ಮುಂದಿನ ಕ್ರಮಕ್ಕಾಗಿ.
3. ಕಛೇರಿ ಪ್ರತಿ.